# ಗಾರ್ಮೆಂಟ್ಸ್ ಕಾರ್ಮಿಕರ ಬದುಕುವ ವೇತನದ ಸಲುವಾಗಿ
# ಬೆಂಗಳೂರು ಮಟ್ಟದ ನ್ಯಾಯಾಧಿಕರಣ

*(ನವೆಂಬರ್ 2012 ರಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ನ್ಯಾಯಾಧಿಕರಣದ ಭಾಗವಾಗಿ)*

*ದಿನಾಂಕ : **ಸೆಪ್ಟೆಂಬರ್ 2, ಭಾನುವಾರ***

*ಸ್ಥಳ: **ಎಸ್.ಸಿ.ಎಮ್ ಹೌಸ್, ಮಿಷನ್ ರಸ್ತೆ, ಬೆಂಗಳೂರು***

*ಸಮಯ: **ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3.30***

*ಆತ್ಮೀಯ ಕಾರ್ಮಿಕರೇ,*

ಬೆಂಗಳೂರಿನಲ್ಲಿ ದುಡಿಯುತ್ತಿರುವ ಗಾರ್ಮೆಂಟ್ಸ್ ಕಾರ್ಮಿಕರಾದ ನಾವು ನಮ್ಮ ವೇತನವು ಹೆಚ್ಚಿಸಬೇಕೆಂದು ಹಲವಾರು ವರ್ಷಗಳಿಂದ ಹೋರಾಟ ನಡೆಸುತ್ತಲೇ ಬಂದಿದ್ದೇವೆ. ಈಗಲೂ ನಾವು ಗಳಿಸುತ್ತಿರುವುದು ತಿಂಗಳಿಗೆ 4500 ರಿಂದ 5500 ರೂ. ಅಷ್ಟೇ. ಗಾರ್ಮೆಂಟ್ಸ್ ಕಾರ್ಮಿಕರು ತಮ್ಮ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ತಿಂಗಳಿಗೆ ಕನಿಷ್ಠ 10,000 ರೂಗಳಾದರೂ ಬೇಕು ಎಂದು ನಾವು ಸರ್ಕಾರವನ್ನು, ಮಾಲೀಕರನ್ನು ಆಗ್ರಹಿಸುತ್ತಿದ್ದೇವೆ. ನಾವು ಸಿದ್ಧಪಡಿಸುತ್ತಿರುವ ಬಟ್ಟೆಯ ಮಾರಾಟ ಬೆಲೆಯಲ್ಲಿ ನಮಗೆ ವೇತನವಾಗಿ ದೊರಕುತ್ತಿರುವುದು ಶೇ 2.5% ಇಂದ ಶೇ% 5 ಅಷ್ಟೇ. ಆದರೆ ಅವುಗಳನ್ನು ಹೊರದೇಶಗಳಲ್ಲಿ ಬ್ರಾಂಡ್‌ಗಳು ನೂರಾರು ರೂ.ಗಳಿಗೆ ಮಾರಾಟ ಮಾಡುತ್ತಿವೆ..... ನಮ್ಮ ಶ್ರಮದಿಂದ ಮಾಲೀಕರು ಹಾಗೂ ಬ್ರಾಂಡ್‌ಗಳು ಗರಿಷ್ಠ ಲಾಭವನ್ನು ಗಳಿಸುತ್ತಿವೆ.

ಇಷ್ಟು ಕಡಿಮೆ ವೇತನ ಪಡೆಯುತ್ತಾ, ನಮ್ಮ ಸಾಮರ್ಥ್ಯ ಮೀರಿದ ಪ್ರೊಡಕ್ಷನ್ ಕೊಡಬೇಕಾದ ಒತ್ತಡ ಅನುಭವಿಸುತ್ತಾ, ಮೇಲಾಧಿಕಾರಿಗಳ ದೌರ್ಜನ್ಯವನ್ನು ಎದುರಿಸುತ್ತಿದ್ದೇವೆ. ನಮ್ಮ ಆರೋಗ್ಯ ಹಾಗೂ ಸುರಕ್ಷತೆಗೆ ಯಾವುದೇ ಕಾಳಜಿ ಇಲ್ಲದೆ ಪ್ರತಿನಿತ್ಯ ಭೀತಿಯಿಂದ ಕೆಲಸ ಮಾಡುತ್ತಿದ್ದೇವೆ. ಕಾರ್ಮಿಕ ಕಾನೂನುಗಳು ಸಮರ್ಪಕವಾಗಿ ಜಾರಿಯಾಗದೆ ನಾವು ಕೆಲಸ ಮಾಡುವ ಕಾರ್ಖಾನೆಗಳು ಇದ್ದಕ್ಕಿದ್ದಂತೆ ಸ್ಥಳಾಂತರವಾಗುತ್ತಿವೆ, ಮುಚ್ಚುತ್ತಿವೆ. ಈ ಎಲ್ಲದರ ವಿರುದ್ಧ, ನಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ನಾವು ಮಾಡುತ್ತಿರುವ ಸಂಘಟನಾ ಪ್ರಯತ್ನಗಳನ್ನು ಆಡಳಿತವರ್ಗವು ಒಡೆಯುತ್ತಿವೆ, ಯೂನಿಯನ್ ಸದಸ್ಯರನ್ನು ನಾನಾ ರೀತಿಯಲ್ಲಿ ಶೋಷಿಸುತ್ತಿವೆ.

ಈ ಎಲ್ಲ ಸಮಸ್ಯೆಗಳ ವಿರುದ್ಧ ನಾವು ಹಲವಾರು ಬಾರಿ ಪ್ರತಿಭಟಿಸಿದ್ದೇವೆ, ಹೋರಾಡುತ್ತಲೇ ಬಂದಿದ್ದೇವೆ, ಆದರೆ ನಮ್ಮ ಧ್ವನಿಯನ್ನು ಸರ್ಕಾರಕ್ಕೆ, ಮಾಲೀಕರಿಗೆ ಕೇಳಿಸುವುದರ ಜೊತೆಗೆ ನಾವು ತಯಾರಿಸುವ ಬಟ್ಟೆಗಳನ್ನು ಮಾರಾಟ ಮಾಡುತ್ತಿರುವ ಬ್ರಾಂಡ್‌ಗಳಿಗೆ ಕೇಳಿಸಲೇ ಬೇಕಿದೆ. ಏಕೆಂದರೆ, ನಮ್ಮ ಸಮಸ್ಯೆಗಳನ್ನು ಸರಿಪಡಿಸುವಲ್ಲಿ ಅವರ ಹೊಣೆಗಾರಿಕೆಯೂ ಇದೆ.

ಈ ನಿಟ್ಟಿನಲ್ಲಿ ನಮ್ಮ ಎಲ್ಲ ಸಮಸ್ಯೆಗಳ ಕುರಿತು ರಾಷ್ಟ್ರಮಟ್ಟದ ನ್ಯಾಯಾಧಿಕರಣವೊಂದನ್ನು ನಡೆಸಬೇಕೆಂದು ಬೆಂಗಳೂರು, ಚೆನ್ನೈ, ದೆಹಲಿ, ಗುರಗಾಂವ್, ತಿರುಪೂರ್‌ನ ಹಲವಾರು ಯೂನಿಯನ್‌ಗಳು, ಸಂಘಟನೆಗಳ ಸಹಯೋಗದಲ್ಲಿ ತೀರ್ಮಾನಿಸಲಾಗಿದೆ. ಅದರ ಭಾಗವಾಗಿ ಬೆಂಗಳೂರಿನ ಕಾರ್ಮಿಕರ ಸಮಸ್ಯೆಗಳನ್ನು ಕುರಿತು **ದಿನಾಂಕ 02.09.2012** ರಂದು **"ಬೆಂಗಳೂರು ಮಟ್ಟದ ನ್ಯಾಯಾಧಿಕರಣ"** ವನ್ನು ಆಯೋಜಿಸಲಾಗಿದೆ. ಬೆಂಗಳೂರಿನ ಹಲವು ಯೂನಿಯನ್‌ಗಳು, ಸಂಘಟನೆಗಳು, ಈ ನ್ಯಾಯಾಧಿಕರಣವನ್ನು ಸಂಘಟಿಸುತ್ತಿವೆ. ಗಾರ್ಮೆಂಟ್ಸ್ ಕಾರ್ಮಿಕರು ತಮ್ಮ ಎಲ್ಲಾ ಸಮಸ್ಯೆಗಳನ್ನು ಕುರಿತು ಅಂದು ಮಾತನಾಡಲಿದ್ದಾರೆ.

ಈ ಸಮಸ್ಯೆಗಳನ್ನು ಆಲಿಸಿ, ಇವುಗಳನ್ನು ಸಮಾಲೋಚಿಸಿ, ತಮ್ಮ ತೀರ್ಮಾನವನ್ನು ನೀಡಲು "ನ್ಯಾಯದರ್ಶಿ" (ಜ್ಯೂರಿ) ಗಳಾಗಿ

**ಡಾ|| ವಿಜಯಾ,** ಹಿರಿಯ ಮಹಿಳಾ ಚಿಂತಕರು, ಪತ್ರಕರ್ತರು
**ಶ್ರೀಮತಿ ಹೇಮಲತಾ ಮಹಿಷಿ,** ಖ್ಯಾತ ನ್ಯಾಯವಾದಿಗಳು. ಹಾಗೂ
**ಶ್ರೀ ಇಸ್ಮಾಯಿಲ್,** ಪತ್ರಕರ್ತರು.

Garment and Textile Workers Union
No. 17/1, 1st Floor, Near Bus Stop
Hosaguddahalli Mysore Road
Bangalore-560026

ಇವರುಗಳು ನಮ್ಮೊಂದಿಗಿರುತ್ತಾರೆ.

## ಬನ್ನಿ, ನೀವೂ ನಮ್ಮೊಂದಿಗೆ ಪಾಲ್ಗೊಳ್ಳಿ. ನಮ್ಮ ಧ್ವನಿಗೆ ನಿಮ್ಮ ಧ್ವನಿಯನ್ನು ಸೇರಿಸಿ

**ಬೆಂಗಳೂರು ಸಮಿತಿ:** ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU), ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಕರ್ನಾಟಕ ಗಾರ್ಮೆಂಟ್ ವರ್ಕರ್ಸ್ ಯೂನಿಯನ್ (KGWU), ಗಾರ್ಮೆಂಟ್ ಲೇಬರ್ ಯೂನಿಯನ್ (GLU), ಮುನ್ನಡೆ, ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್ (HMKP), ಪರ್ಯಾಯ ಕಾನೂನು ವೇದಿಕೆ (ALF), ಮರಾ (MARAA), ಸಿವಿಡೆಕ್-ಇಂಡಿಯಾ, ಫೆಡಿನಾ, ವಿಮೋಚನಾ, ಸಮಾನತಾ ಮಹಿಳಾ ವೇದಿಕೆ, ಹೆಂಗಸರ ಹಕ್ಕಿನ ಸಂಘ

Scanned with OKEN Scanner